ಈ) ಮೇಲೆ ಹೇಳಿರುವಂತೆ ಬೀಳಗಿ ತಾಲ್ಲೂಕಿನಲ್ಲಿ ಮುಖ್ಯ ಕಾಲುವೆ ಇಲ್ಲ. ಆದರೆ ಮುಖ್ಯ ಕಾಲುವೆಯು ಧೂಪದಾಳ ಟಣಕಟ್ಟಿನಿಂದ ೧೦೯ ಕಿ.ಮಿ.ದವರೆಗೆ ಇರುತ್ತದೆ. ಈ ಮುಖ್ಯ ಕಾಲುವೆಯಲ್ಲಿ ಕಿ.ಮೀ. ೧೮ರಿಂದ ೭೦ ಕಿ.ಮೀ.ದಲ್ಲಿ ೩೮.೨ ಕಿ.ಮೀ. ಉದ್ದದಷ್ಟು ಅಲ್ಲಲ್ಲಿ ಲೈನಿಂಗ್ ಮಾಡಲಾಗಿದೆ. ಲೈನಿಂಗ್ ಮಾಡಲು ನಿಗದಿತ ಕಾರ್ಯಕ್ರಮ ಹಾಕಿಕೊಂಡಿಲ್ಲ. ಕಾಲುವೆಯು ಸುಮಾರು ಎಂಟು ತಿಂಗಳು ಪ್ರವಹಿಸುತ್ತಿದ್ದರಿಂದ, ಲೈನಿಂಗ್ ಕೆಲಸವನ್ನು ಉಳಿದ ನಾಲ್ಕು ತಿಂಗಳುಗಳಲ್ಲಿ, ಹಣದ ಪೂರೈಕೆ ಅನುಸರಿಸಿ ಮಾಡಬೇಕಾಗುತ್ತದೆ.

ಸುಳ್ಯ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯವರು ಮರಗಳನ್ನು ಸಾಗಿಸುವ ಬಗ್ಗೆ

೧೧೭೨. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ಜನರಿಗೆ ದರಖಾಸ್ತು (ಡಿ. ಆರ್.) ಆದ ಸ್ಥಳದಿಂದ ಮರಗಳನ್ನು ಅರಣ್ಯ ಇಲಾಖೆಯವರು ಸೂಕ್ತ ಸಮಯದಲ್ಲಿ ಸಾಗಿಸದೇ ಇರಲು ಕಾರಣವೇನು ?

ಆ) ಸದರಿ ಸ್ಥಳಕ್ಕೆ ಅರಣ್ಯ ಇಲಾಖೆಯವರು ಬೇಲಿ ಹಾಕಲು ಕಾರಣವೇನು ಹಾಗೂ ಇದರಿಂದ ಆದ ತೊಂದರೆಯನ್ನು ಸರ್ಕಾರದವರು ನಿವಾರಿಸುವಿರಾ ?

ಶ್ರೀ ಬಿ. ಎ ಜೀವಿಜಯ (ಅರಣ್ಯ ಮಂತ್ರಿಗಳು).—

ಅ) ದರಖಾಸ್ತು ಪ್ಲಾಟಿನ ಮಾಲ್ಲಿಯ ಬೆಲಿಯು ರೂ. ೨,೦೦೦-೦೦ ಕ್ಕಿಂತ ಜಾಸ್ತಿ ಇದ್ದಲ್ಲಿ ಆ ಮಾಲ್ಕಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರು ತಪಸಣೆ ಮಾಡಬೇಕಾಗುತ್ತದೆ. ಮತ್ತು ಮಾಲ್ಕಿಯನ್ನು ತೆಗೆಯಂಥ ಕೆಲಸವನ್ನು ಟೆಂಡರು ಕರೆದೂ ಕಂಟ್ರಾಕ್ಟರುದಾರರಿಗೆ ವಹಿಸಬೇಕು. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ತಮ್ಮ ಇತರೆ ದೈನಂದಿನ ಕರ್ತವ್ಯಗಳೊಡನೆ ಈ ಎಲ್ಲಾ ದರಖಾಸ್ತು ಪ್ಲಾಟುಗಳನ್ನು ತಪಾಸಣೆ ಮಾಡಬೇಕಾಗಿದ್ದು ಇದಕ್ಕೆ ಬಹಳ ಸಮಯ ಹಿಡಿಯುತ್ತವೆ. ಮಾಲ್ಕಿ ತೆಗೆಯಲು ಮುಂದೆ ಬರುವ ಕಂಟ್ರಾಕ್ಟುದಾರರ ಸಂಖ್ಯೆ ಬಹಳ ಕಡಿಮೆ. ಯಾಕೆಂದರೆ ಟೆಂಡರಿಗಿಟ್ಟು ಪ್ರಮಾಣವು ಬಹಳ ಕಡಿಮೆಯಿರುವುದರಿಂದ.

ಆ) ದರಖಾಸ್ತಿಯ ಯಾವ ಪ್ಲಾಟಿನ ಸುತ್ತಲೂ ಅರಣ್ಯ ಇಲಾಖೆಯವರು ಬೇಲಿ ಹಾಕಿಲ್ಲ.

ಸುಳ್ಯ ಕ್ಷೇತ್ರದಲ್ಲಿ ಸೇತುವೆ ಮತ್ತು ರಸ್ತೆ ಕಾಮಗಾರಿ

೧೧೯೯. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಲೋಕಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸುಳ್ಯ ವಿಧಾನ ಸಭಾ ವಿೂಸಲು ಕ್ಷೇತ್ರದಲ್ಲಿ ಸರಕಾರವು ಮಂಜೂರಾತಿ ನೀಡಿ ಪೂರ್ಣಗೊಳ್ಳಬೇಕಾಗಿರುವ ಸೇತುವೆಗಳ ಸಂಖ್ಯೆ ಎಷ್ಟು ?

ಆ) ಸರಕಾರದವರು ಸೇತುವೆ ಮತ್ತು ರಸ್ತೆ ನಿರ್ಮಾಣ ಮಂಜೂರಾತಿ ನೀಡುವಲ್ಲಿ ವಿೂಸಲು ಕ್ಷೇತ್ರಕ್ಕೆ ಆದ್ಯತೆ ನೀಡುವರೇ ?

ಇ) ಹಾಗಿದ್ದಲ್ಲಿ ಸುಳ್ಯ ಕ್ಷೇತ್ರಕ್ಕೆ ಆದ್ಯತೆ ಮೇರೆಗೆ ಮಂಜೂರಾತಿ ನೀಡಿದ ಸೇತುವೆ ಮತ್ತು ರಸ್ತೆ ಕಾಮಗಾರಿಗಳೆಷ್ಟು ?

ಶ್ರೀ ಹೆಚ್. ಡಿ. ದೇವೆಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಏಳು.

ಆ) ಇಲ್ಲ. ಹಣದ ಲಭ್ಯತೆಗೆ ಮತ್ತು ಆದ್ಯತೆಗೆ ಅನುಗುಣವಾಗಿ ಕೆಲಸಗಳನ್ನು ಮಂಜೂರು ಮಾಡಲಾಗುವುದು.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.